"ಮಧುರ ಮಕ್ಕಳೇ - ತಂದೆಯೇ ನಿಮ್ಮ ಶಿಕ್ಷಕ ಹಾಗೂ ಗುರುವಾಗಿದ್ದಾರೆ, ಅವರಿಗೆ ಬದುಕಿದ್ದು ಕೊರಳಿನ ಮಾಲೆಯ ಮಣಿಯಾಗಿ ಪೋಣಿಸಲ್ಪಡಬೇಕು"

ಪ್ರಶ್ನೆ: ಮಕ್ಕಳು ನೀವು ಯಾವ ನಿಶ್ಚಯದ ಆಧಾರದಿಂದ ಪಕ್ಕಾ ಬ್ರಾಹ್ಮಣರಾಗುತ್ತೀರಿ?

ಉತ್ತರ: ನಿಮಗೆ ಈ ಕಣ್ಣಿಂದ ನೋಡುವುದೆಲ್ಲಾ, ದೇಹ ಸಹಿತ ಎಲ್ಲವೂ ಸಹ ಹಳೆಯದಾಗಿದೆ ಎಂಬ ನಿಶ್ಚಯವಿದೆ. ಈ ಪ್ರಪಂಚ ಬಹಳ ಅಶುದ್ಧವಾಗಿದೆ, ಇಲ್ಲಿ ತುಂಬಾ ಆಪತ್ತುಗಳು ಆಗುತ್ತಿರುತ್ತದೆ. ಇದು ಇರಲು ಯೋಗ್ಯವಿಲ್ಲದಾಗಿದೆ. ನಮಗೀಗ ತಂದೆಯಿಂದ ಸ್ವರ್ಗದ ಆಸ್ತಿ ಪ್ರಾಪ್ತಿ ಆಗುತ್ತಿದೆ ಎಂಬ ನಿಶ್ಚಯದ ಆಧಾರದಿಂದ ನೀವು ಜೀವನದಲ್ಲಿದ್ದು ಹಳೆಯ ಪ್ರಪಂಚ ಹಾಗೂ ಹಳೆಯ ಶರೀರದಿಂದ ಮರುಜನ್ಮ ಪಡೆಯಲು ತಂದೆಗೆ ಆಗಿದ್ದೀರಿ. ತಂದೆಯಿಂದ ವಿಶ್ವದ ರಾಜ್ಯ ಭಾಗ್ಯ ಪ್ರಾಪ್ತಿಯಾಗುವುದೆಂಬ ನಿಶ್ಚಯ ನಿಮಗಿದೆ.

ಗೀತೆ: ಸತ್ತರು ನಿಮ್ಮ ಮಡಿಲಲ್ಲಿಯೇ, ಜೀವಿಸಿದ್ದರೂ ನಿಮ್ಮ ಮಡಿಲಲ್ಲಿಯೇ...........

ಓಂ ಶಾಂತಿ. ಮಕ್ಕಳು ಈ ಹಾಡನ್ನು ಹಾಡುತ್ತಾರೆ, ಯಾರು ಕಲ್ಲು ಬುದ್ಧಿಯವರಾಗಿದ್ದಾರೆ, ಅವರು ಪಾರಸ ಬುದ್ಧಿಯವರಾಗಲು ಈ ಹಾಡನ್ನು ಹಾಡುತ್ತಾರೆ. ಕಲ್ಲುಗಳು ಹಾಡನ್ನು ಹಾಡಿದವೆಂಬ ಒಂದು ಗೀತೆಯು ಸಹ ಇದೆ. ಆ ಕಲ್ಲುಗಳಂತು ಗೀತೆಯನ್ನು ಹೇಳಲು ಸಾಧ್ಯವಿಲ್ಲ. ಆದರೆ ಕಲ್ಲು ಬುದ್ಧಿ ಮನುಷ್ಯರು ಈ ಹಾಡನ್ನು ಹಾಡುತ್ತಾರೆ. ಈಗ ನಿಮಗೆ ಈಶ್ವರೀಯ ಬುದ್ಧಿ ಪ್ರಾಪ್ತಿಯಾಗಿದೆ. ಈಶ್ವರನೇ ತನ್ನ ಮಕ್ಕಳಿಗೆ ಬುದ್ಧಿಯನ್ನು ನೀಡಿದ್ದಾರೆ. ನಾವು ಈಶ್ವರನಿಗಾದಾಗ ದೇಹ ಸಹಿತ ಇಡೀ ಪ್ರಪಂಚವನ್ನು ಮರೆತು ಹೋಗುತ್ತೇವೆ, ಏಕೆಂದರೆ ಈ ಪ್ರಪಂಚ ನಾವು ವಾಸ ಮಾಡಲು ಯೋಗ್ಯವಿಲ್ಲದಾಗಿದೆ. ಬಹಳ ಮಲೀನ ಪ್ರಪಂಚವಾಗಿದ್ದು ಒಂದಲ್ಲ ಒಂದು ತೊಂದರೆ ಆಗುತ್ತಿರುತ್ತದೆ. ಬಿಡವಿಲ್ಲದ ಕೆಲಸ-ಕಾರ್ಯವಿರುತ್ತದೆ. ಈ ಪ್ರಪಂಚದಲ್ಲಿ ಯಾವುದೇ ಸುಖವಿಲ್ಲದ ಕಾರಣ ನಾವು ತಂದೆಯ ಕೊರಳಲ್ಲಿ ಮಣಿಯಾಗಿ ಪೋಣಿಸಲ್ಪಡುತ್ತೇವೆ. ನಮ್ಮನ್ನು ಆತ್ಮನೆಂದು ನಿಶ್ಚಯ ಮಾಡಿಕೊಂಡು ತಂದೆಗೆ ಮಕ್ಕಳಾಗುತ್ತೇವೆ. ಆಗ ಹಳೆಯ ಪ್ರಪಂಚದಿಂದ ಹಾಗೂ ಹಳೆಯ ಶರೀರದಿಂದ ಮನಸ್ಸು ದೂರವಾಗಿದೆ. ಏಕೆಂದರೆ ನಿಮ್ಮಿಂದ ನಮಗೆ ಅಪಾರವಾದ ಸ್ವರ್ಗದ ಆಸ್ತಿ ಪ್ರಾಪ್ತಿಯಾಗುತ್ತದೆ. ಎಲ್ಲಿಯವರೆಗೆ ಈ ನಿಶ್ಚಯವಿರುವುದಿಲ್ಲ ಅಲ್ಲಿಯ ವರೆಗೆ ಬ್ರಾಹ್ಮಣರಾಗಲು ಸಾಧ್ಯವಿಲ್ಲ. ಬದುಕಿರುವಾಗಲೇ ತಂದೆಯ ಮಗುವಾಗಬೇಕು. ನಿರಾಕಾರ ತಂದೆಗೆ ಮಾತ್ರ ತಂದೆಯೆಂದು ಕರೆಯಲಾಗುತ್ತದೆ. ನೀವು ನಮ್ಮ ತಂದೆ, ಶಿಕ್ಷಕ, ಸದ್ಗುರು ಆಗಿದ್ದೀರಿ. ನೀವು ನಮಗೆ ಪ್ರತ್ಯಕ್ಷ ಫಲ ಕೊಡುವವರಾಗಿದ್ದೀರಿ. ತಂದೆಯ ರೂಪದಲ್ಲಿ ವಿಶ್ವರಾಜ್ಯ ಭಾಗ್ಯದ ಆಸ್ತಿಯನ್ನು ಕೊಡುವವರಾಗಿದ್ದು, ಶಿಕ್ಷಕನಾಗಿ ಇಡೀ ಬ್ರಹ್ಮಾಂಡ ಹಾಗೂ ಜಗತ್ತಿನ ಆದಿ, ಮಧ್ಯ, ಅಂತ್ಯದ ಜ್ಞಾನ ಕೊಡುತ್ತಿದ್ದು, ಸದ್ಗುರುವಾಗಿ ನಮಗೆ ಮುಕ್ತಿ-ಜೀವನ್ಮುಕ್ತಿಯಲ್ಲಿ ಕರೆದುಕೊಂಡು ಹೋಗುತ್ತೀರಿ. ಹೇ ತಂದೆ ನಾವು ನಿಮ್ಮ ಜೊತೆಯಲ್ಲಿಯೇ ಬರುತ್ತೇವೆ. ನೀವೇ ನಮ್ಮ ಸತ್ಯವಾದ ಸದ್ಗುರು ಆಗಿದ್ದೀರಿ. ಆ ಗುರುಗಳು ನಮ್ಮನ್ನು ಜೊತೆಯಲ್ಲಿ ಕರೆದೊಯ್ಯುವುದಿಲ್ಲ. ಏಕೆಂದರೆ ಅವರಿಗೆ ಮುಕ್ತಿ-ಜೀವನ್ಮುಕ್ತಿಯ ಮಾರ್ಗವೇ ತಿಳಿದಿರುವುದಿಲ್ಲ. ಆದುದರಿಂದ ಅವರು ನಿಮ್ಮನ್ನು ಸರ್ವವ್ಯಾಪಿ ಎಂದು ಹೇಳುವಾಗ ಆಸ್ತಿ ಯಾರು ಕೊಡುತ್ತಾರೆ! ಆಗ ಯಾರಿಗೆ ತಂದೆಯೆಂದು ಕರೆಯುತ್ತಾರೆ? ಈಗ ನಾವು ನಿರಾಕಾರ ಶಿವ ತಂದೆಗೆ ಮಕ್ಕಳಾಗಿದ್ದೇವೆಂದು ತಿಳಿದುಕೊಂಡಿದ್ದೀರಿ. ಈಗ ನಮ್ಮ ದೇಹಾಭಿಮಾನ ದೂರವಾಗಿ ನಾವು ನಿಮ್ಮ ಮಾರ್ಗದರ್ಶನದಂತೆ ನಡೆಯುತ್ತೇವೆ. ನೀವು ದೇಹದ ಸಂಬಂಧದಿಂದ ಬುದ್ಧಿಯನ್ನು ದೂರ ಮಾಡಿ ತಮ್ಮನ್ನು ಆತ್ಮನೆಂದು ನಿಶ್ಚಯ ಮಾಡಿಕೊಂಡು ನನ್ನನ್ನು ನೆನಪು ಮಾಡಿ ಎಂದು ಹೇಳುತ್ತೀರಿ. ಯಾವಾಗ ಆತ್ಮ ಶರೀರದಿಂದ ಬೇರೆ ಆಗುತ್ತದೆ, ಆಗ ಯಾವ ಸಂಬಂಧವೂ ಇರುವುದಿಲ್ಲ. ಎಲ್ಲಿಯವರೆಗೆ ತಾಯಿಯ ಗರ್ಭದಲ್ಲಿ ಪ್ರವೇಶವಾಗುವುದಿಲ್ಲ, ಅಲ್ಲಿಯವರೆಗೆ ನೀವು ಪ್ರಪಂಚದಿಂದ ದೂರ ಇರುತ್ತೀರಿ. ಅದೇ ರೀತಿ ಈಗ ತಂದೆ ತಿಳಿಸುತ್ತಿದ್ದಾರೆ, ಮಕ್ಕಳೇ ನೀವು ಜೀವನದಲ್ಲಿದ್ದು ಎಲ್ಲವನ್ನು ಮರೆತು ನನ್ನ ಮಕ್ಕಳಾಗಿ, ಆಗ ನಿಮ್ಮನ್ನು ನಾನು ನನ್ನ ಜೊತೆಯಲ್ಲಿ ಮನೆಗೆ ಕರೆದುಕೊಂಡು ಹೋಗುತ್ತೇನೆ. ಈ ಪ್ರಪಂಚವು ಸಮಾಪ್ತಿ ಆಗುತ್ತದೆ. ದೇವತೆಗಳು ಎಂದಿಗೂ ಈ ಪತಿತ ಪ್ರಪಂಚದಲ್ಲಿ ಬರುವುದಿಲ್ಲ. ಆದುದರಿಂದ ಲಕ್ಷ್ಮಿಯನ್ನು ಆಹ್ವಾನ ಮಾಡುವಾಗ ಬಹಳ ಸ್ವಚ್ಛ ಮಾಡುತ್ತಾರೆ. ಆದರೆ ಲಕ್ಷ್ಮೀ ಬರಲು ಇದು ಸತ್ಯಯುಗವೇನಲ್ಲ. ಹಾಗಾದರೆ ನಾರಾಯಣ ಹೇಗೆ ಬರುತ್ತಾನೆ? ಮಹಾಲಕ್ಷ್ಮಿಗೆ ನಾಲ್ಕು ಭುಜಗಳನ್ನು ಏಕೆ ತೋರಿಸಿದ್ದಾರೆ? ಇದು ಲಕ್ಷ್ಮೀ-ನಾರಾಯಣರ ಇಬ್ಬರ ಪ್ರತೀಕವೆಂದು ಯಾರೂ ಸಹ ತಿಳಿದುಕೊಂಡಿಲ್ಲ. ಈ ರೀತಿ ನಾಲ್ಕು ಭುಜಗಳುಲ್ಲ ಚಿತ್ರದಂತೆ ಚೈತನ್ಯದಲ್ಲಿರಲು ಸಾಧ್ಯವಿಲ್ಲ. ನಾಲ್ಕು ಭುಜಗಳಿದ್ದಾಗ ಎರಡು ಮುಖ ಇರಬೇಕಲ್ಲವೆ. ನಾಲ್ಕು ಕಾಲುಗಳನ್ನು ಎಂದಿಗೂ ತೋರಿಸುವುದಿಲ್ಲ. ಏಕೆಂದರೆ ಈ ರೀತಿ ಮನುಷ್ಯರು ಎಲ್ಲಿಯು ಇರಲು ಸಾಧ್ಯವಿಲ್ಲ. ಲಕ್ಷ್ಮೀ-ನಾರಾಯಣ ಇಬ್ಬರು ಜೋಡಿಯ ಸಂಕೇತವನ್ನು ತಿಳಿದುಕೊಳ್ಳಲು ತೋರಿಸಿದ್ದಾರೆ. ಲಕ್ಷ್ಮೀ-ನಾರಾಯಣ ಬೇರೆ-ಬೇರೆಯಾಗಿ ಎರಡು ಭುಜಗಳಿದ್ದಾಗ ಎರಡು ಕಾಲುಗಳು ಇರುತ್ತವೆ. ಮೊಟ್ಟ ಮೊದಲನೆಯದಾಗಿ ನಮ್ಮ ತಂದೆ, ಶಿಕ್ಷಕ, ಸದ್ಗುರು ಮೂರು ಸಂಬಂಧವಾಗಿದ್ದು ನಮ್ಮನ್ನು ಮನೆಗೆ ಹಿಂತಿರುಗಿ ಕರೆದುಕೊಂಡು ಹೋಗುತ್ತಾರೆ. ಅವರಿಗೆ ಯಾವ ಶಿಷ್ಯರಿಲ್ಲ. ಅವರು ಅಂತ್ಯದಲ್ಲಿ ಎಲ್ಲರನ್ನು ಮನೆಗೆ ಹಿಂತಿರುಗಿ ಕರೆದುಕೊಂಡು ಹೋಗುತ್ತಾರೆ. ಈಗ ನಾಟಕ ಸಮಾಪ್ತಿ ಆಗುತ್ತಿರುವ ಕಾರಣ

ಎಲ್ಲರು ಮನೆಗೆ ಹಿಂತಿರುಗಬೇಕೆಂದು ತಂದೆ ತಿಳಿಸುತ್ತಿದ್ದಾರೆ. ಸದ್ಗತಿದಾತ, ಪತಿತ ಪಾವನ ನಾನು ಒಬ್ಬನೇ ಆಗಿದ್ದೇನೆ. ನಾನು ಕಾಲರಕಾಲ ಆಗಿದ್ದೇನೆ. ಈ ಯಮದೂತ ಮೊದಲಾದವರ ಸಾಕ್ಷಾತ್ಕಾರ ಆಗುತ್ತದೆ. ಏಕೆಂದರೆ ಪಾಪ ಮಾಡುವ ಕಾರಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಈ ರೀತಿ ಯಮದೂತ ಯಾರೂ ಇಲ್ಲವೇ ಇಲ್ಲ. ಆತ್ಮ ಒಂದು ಶರೀರ ಬಿಟ್ಟು ಮತ್ತೊಂದು ಶರೀರ ಪಡೆಯುವಾಗ ಗರ್ಭದಲ್ಲಿಯೇ ಶಿಕ್ಷ ಪಡೆಯುತ್ತಾ ಪಶ್ಚಾತಾಪ ಪಡುತ್ತದೆ. ಮೊಟ್ಟ ಮೊದಲನೆಯದಾಗಿ ಯಾರಿಗಾದರೂ ಇವರೇ ನಮ್ಮ ತಂದೆ, ಶಿಕ್ಷಕ, ಸದ್ಗುರು ಆಗಿದ್ದಾರೆಂಬ ನಿಶ್ಚಯ ಪಡೆಸಬೇಕು. ಅವರೊಬ್ಬರನ್ನೇ ನೆನಪು ಮಾಡಬೇಕು. ರಚಯಿತನೂ ಸಹ ಒಬ್ಬರೇ ಆಗಿದ್ದಾರೆ. ಕೇವಲ ಹತ್ತು ಅಥವಾ ನೂರು ಜನರ ರಚಯಿತನಲ್ಲ, ಅಥವಾ ಹತ್ತು ಪ್ರಪಂಚದ ರಚಯಿತನಲ್ಲ.

ಬಾಬಾ ನಾವು ನಿಮ್ಮ ಕೊರಳಿನ ಮಾಲೆ ಆಗುತ್ತೇವೆಂದು ಮಕ್ಕಳು ಹೇಳುತ್ತಾರೆ. ನಂತರ ನಮ್ಮ ರುದ್ರ ಮಾಲೆ ಆಗುತ್ತದೆ. ಈ ಸಮಯದಲ್ಲಿ ನೀವು ಬ್ರಾಹ್ಮಣರು ಪುರುಷಾರ್ಥಿಗಳಾಗಿರುವ ಕಾರಣ ಪುರುಷಾರ್ಥದಲ್ಲಿ ಏರು-ಪೇರು ಆಗುತ್ತಾ ಇರುತ್ತದೆ. ಆದುದರಿಂದ ನಿಮ್ಮ ಮಾಲೆ ಮಾಡಲು ಆಗುವುದಿಲ್ಲ. ನಾವು ಮೊದಲು ತಂದೆಗೆ ಮಾಲೆಯಾಗಿ ನಂತರ ವಿಷ್ಣು ಮಾಲೆ ಆಗುತ್ತೇವೆಂದು ತಿಳಿದುಕೊಂಡಿದ್ದೇವೆ. ಮೊಟ್ಟ ಮೊದಲು ನಿಮ್ಮ ನಿರಾಕಾರಿ ಮಾಲೆ ಪರಮಧಾಮದಲ್ಲಿ ಬರುತ್ತಾರೆ, ನಂತರ ಸಾಕಾರ ಮಾಲೆಯಾಗಿ ವಿಷ್ಣು ಲೋಕದಲ್ಲಿ ಬರುತ್ತೇವೆ. ಇಲ್ಲವಾದರೆ ಸಾಕಾರಿ ಮನುಷ್ಯರು, ಸಾಕಾರಿ ಮನುಷ್ಯರನ್ನು ದತ್ತು ತೆಗೆದುಕೊಳ್ಳುತ್ತಾರೆ. ಇಲ್ಲಿ ನಿರಾಕಾರಿ ಆತ್ಮಗಳನ್ನು ನಿರಾಕಾರಿ ಶಿವ ತಂದೆ ದತ್ತು ತೆಗೆದುಕೊಂಡಿದ್ದಾರೆ. ಹೇ ಆತ್ಮಗಳೇ ನೀವು ನಮ್ಮವರೆಂದು ಬ್ರಹ್ಮನ ಮುಖಾಂತರ ತಿಳಿಸುತ್ತಾರೆ. ಹೇ ಸಾಕಾರ ಮನುಷ್ಯರೇ ನೀವು ನನ್ನವರೆಂದು ಎಂದಿಗೂ ಹೇಳುವುದಿಲ್ಲ. ಇಲ್ಲಿ ನಿರಾಕಾರ ಆತ್ಮ ನಿರಾಕಾರ ತಂದೆಗೆ ನಾನು ನಿಮ್ಮವರೆಂದು ಹೇಳುತ್ತದೆ. ದತ್ತು ತೆಗೆದುಕೊಳ್ಳುವವರು ಶರೀರವನ್ನು ನೋಡುತ್ತಾರೆ. ತಮ್ಮನ್ನು ಎಂದಿಗೂ ಆತ್ಮನೆಂದು ತಿಳಿದುಕೊಂಡಿರುವುದಿಲ್ಲ. ಸಹೋದರ ಸಹೋದರನನ್ನು ದತ್ತು ಮಾಡಿಕೊಂಡರೆ ಏನು ಸಿಗುತ್ತದೆ? ಇಲ್ಲಿ ತಂದೆ ನಮಗೆ ಆಸ್ತಿ ಕೊಡಲು ದತ್ತು ತೆಗೆದು ಕೊಳ್ಳುತ್ತಾರೆ. ಈ ಗುಹ್ಯ ಮಾತುಗಳನ್ನು ಯಾರು ಬಹಳ ಚೆನ್ನಾಗಿ ಓದುತ್ತಾರೆ, ಅವರ ಬುದ್ಧಿಯಲ್ಲಿ ಮಾತ್ರ ಈ ರಹಸ್ಯಗಳು ಕುಳಿತುಕೊಳ್ಳುತ್ತವೆ. ದೇಹಾಭಿಮಾನವನ್ನು ಬಿಟ್ಟು ನೀವು ನನ್ನ ಮಕ್ಕಳಾದಾಗ ನಾನು ನಿಮ್ಮನ್ನು ನಿರಾಕಾರಿ ಪ್ರಪಂಚದಲ್ಲಿ ಕರೆದುಕೊಂಡು ಹೋಗುತ್ತೇನೆಂದು ತಂದೆ ತಿಳಿಸುತ್ತಾರೆ. ಕೃಷ್ಣನ ಆತ್ಮನಿಗೆ ಪರಮಾತ್ಮನೆಂದು ಹೇಳುವುದಿಲ್ಲ. ಕೃಷ್ಣನ ಆತ್ಮನು ಸಹ ಎಂಬತ್ತನಾಲ್ಕು ಜನ್ಮಗಳನ್ನು ಪಡೆಯುತ್ತಾನೆ. ಲಕ್ಷ್ಮೀ-ನಾರಯಣರ ರಾಜ್ಯ ನಡೆದು ಬಂದಿದೆ. ರಾಜ-ರಾಜನಾಗಿದ್ದು, ರಾಣಿ-ರಾಣಿಯಾಗಿರುತ್ತಾರೆ, ಪ್ರತಿಯೊಬ್ಬರಿಗೂ ತಮ್ಮದೇ ಆದ ಭಿನ್ನ-ಭಿನ್ನ ಪಾತ್ರ ಪ್ರಾಪ್ತಿಯಾಗಿರುತ್ತದೆ. ಎಂಬತ್ತನಾಲ್ಕು ಜನ್ಮಗಳನ್ನು ಪಡೆಯುತ್ತಾರೆ. ಇದು ಒಬ್ಬರ ಮಾತೇನಲ್ಲ. ಎಲ್ಲರೂ ಸಹ ಪುನರ್ಜನ್ಮವನ್ನು ಪಡೆಯಬೇಕಾಗುತ್ತದೆ. ಎಂಬತ್ತನಾಲ್ಕು ಜನ್ಮಗಳ ಚಕ್ರ ಹೇಗೆ ಸುತ್ತುತ್ತದೆ ಎಂದು ನೀವು ತಿಳಿಸಿಕೊಡಬೇಕು. ಎಂಬತ್ತನಾಲ್ಕು ಲಕ್ಷ ಜನ್ಮಗಳೆಂದು ಹೇಳಿದಾಗ ಎಲ್ಲವೂ ಏರು-ಪೇರು ಆಗುತ್ತದೆ. ಲಕ್ಷಾಂತರ ವರ್ಷದ ಮಾತುಗಳು ಯಾರಿಗೂ ಸಹ ನೆನಪಿರುವುದಿಲ್ಲ. ಈಗ ನಿಮಗೆ ಎಲ್ಲಾ ಮಾತುಗಳು ನೆನಪಿಗೆ ಬಂದಿದೆ. ಇಂದು ಭ್ರಷ್ಟಾಚಾರ ಪ್ರಪಂಚವಿದೆ, ನಾಳೆ ಶ್ರೇಷ್ಠಾಚಾರಿ ಪ್ರಪಂಚವಾಗುತ್ತದೆ. ಹೇಗೆ ಶಾಸ್ತ್ರಗಳಲ್ಲಿ ಬರೆದಿರುವಂತೆ ನಾವೂ ಸಹ ಹೊಸ ಭಾರತ ಮಾಡುತ್ತೇವೆಂದು ಬರೆಯಬಹುದು. ಈಗ ಹೊಸ ಭಾರತವು ಹೊಸ ಪ್ರಪಂಚದಲ್ಲಿರುತ್ತದೆ. ಅಲ್ಲಿ ದೇವತಾ ಧರ್ಮದ ವಿನಃ ಬೇರೆ ಯಾವ ಧರ್ಮಗಳಿರುವುದಿಲ್ಲ. ಈಗ ಭಾರತದಲ್ಲಿ ಲೆಕ್ಕವಿಲ್ಲದಷ್ಟು ಧರ್ಮಗಳಿವೆ. ಅನೇಕ ಪ್ರಕಾರದ ರಂಬೆ-ಕೊಂಬೆಗಳಿವೆ, ಈಗ ಅಂತ್ಯವಾಗಿರುವ ಕಾರಣ ಅನೇಕ ಧರ್ಮಗಳಾಗಿವೆ. ಲಕ್ಷ್ಮೀ-ನಾರಾಯಣರಿಂದ, ಬ್ರಹ್ಮಾ-ಸರಸ್ವತಿ ಆಗುತ್ತಾರೆಂದು ತೋರಿಸಲಾಗಿದೆ. ನಂತರ ಬ್ರಹ್ಮಾ-ಸರಸ್ವತಿಯಿಂದ ಲಕ್ಷ್ಮೀ-ನಾರಾಯಣರಾಗುತ್ತಾರೆ. ಆದುದರಿಂದ ವಿಷ್ಣುವಿನಿಂದ ಬ್ರಹ್ಮಾ, ಬ್ರಹ್ಮನಿಂದ ವಿಷ್ಣು ಹೇಗೆ ಆಗುತ್ತಾರೆಂದು ತೋರಿಸುತ್ತಾರೆ. ಈಗ ನೀವು ವಿಷ್ಣು ಕುಲದವರಾಗುತ್ತಿದ್ದೀರಿ. ಈಗ ನಾಟಕ ಪೂರ್ಣವಾಗುತ್ತಿದೆ ಎಂದು, ಯಾರು ಬಹಳ ಚೆನ್ನಾಗಿ ತಿಳಿದುಕೊಳ್ಳುತ್ತಾರೆ, ಅವರಿಗೆ ಬಹಳ ಖುಷಿ ಇರುತ್ತದೆ. ನಾಟಕವೆಂದು ಹೇಳಿದಾಗ ಆದಿ-ಮಧ್ಯ-ಅಂತ್ಯ ಎಲ್ಲವು ನೆನಪಿಗೆ ಬರುತ್ತದೆ. ಯಾರು ನಿಮ್ಮ ಬಳಿ ಬುದ್ಧಿವಂತ ಜ್ಞಾನಿಗಳಿರುತ್ತಾರೆ, ಅವರಿಗೆ ಈ ಬೇಹದ್ದಿನ ನಾಟಕ ನೆನಪಿರುತ್ತದೆ. ಮೊದಲು ಸೂರ್ಯವಂಶ, ಚಂದ್ರವಂಶ ರಾಜ್ಯವಾಯಿತು, ನಂತರ ಬೇರೆ ಧರ್ಮದವರು ರಾಜ್ಯಭಾರ ಮಾಡಲು ಬರುತ್ತಾರೆ. ಆಮೇಲೆ ವೈಶ್ಯ ವಂಶ, ಶೂದ್ರವಂಶದವರು ಆಗುತ್ತೇವೆ. ನಾವೇ ಆತ್ಮಗಳು ಎಂಬತ್ತನಾಲ್ಕು ಜನ್ಮಗಳನ್ನು ತೆಗೆದುಕೊಳ್ಳುತ್ತೇವೆ. ಇದೂ ಸಹ ಅನೇಕರಿಗೆ ನೆನಪು ಇರುವುದಿಲ್ಲ. ನಾಟಕದ ಆದಿ-ಮಧ್ಯ-ಅಂತ್ಯದ ಜ್ಞಾನ ನೆನಪಿರಬೇಕು. ಇದು ಐದು ಸಾವಿರ ವರ್ಷದ ನಾಟಕವೆಂದು ಬುದ್ಧಿಯಲ್ಲಿರಬೇಕು. ಆತ್ಮ ಎಷ್ಟೊಂದು ಸೂಕ್ಷ್ಮವಾಗಿದ್ದು ಎಂಬತ್ತನಾಲ್ಕು ಜನ್ಮಗಳ ಪಾತ್ರವನ್ನು ಅಭಿನಯಿಸುತ್ತದೆ. ಪರಮಾತ್ಮನು ಸಹ ಅತಿ ಸೂಕ್ಷ್ಮವಾಗಿದ್ದು ಅವರು ಈ ನಾಟಕದಲ್ಲಿ ಪಾತ್ರ ಮಾಡಲು ಬಂಧಿಸಲ್ಪಟ್ಟಿದ್ದಾರೆ. ಎಲ್ಲರೂ ನಾಟಕದ ವಶದಲ್ಲಿ ಬಂಧಿಸಲ್ಪಟ್ಟಿದ್ದಾರೆ. ಯಾವಾಗ ಸಂಗಮವಾಗುತ್ತದೆ, ಆಗ ಪರಮಾತ್ಮ ಪಾತ್ರ ಮಾಡುವ ಸಮಯ ಪ್ರತ್ಯಕ್ಷವಾಗುತ್ತದೆ. ಪರಮಾತ್ಮನಿಗೆ ಹೊಸ ಸೃಷ್ಟಿಯನ್ನು ರಚಿಸೋಣವೆಂಬ ಸಂಕಲ್ಪ ಬಂದಿತು..... ಎಂಬ ಮಾತು ಶಾಸ್ತ್ರಗಳಲ್ಲಿ ಬರೆಯಲ್ಪಟ್ಟಿದೆ. ಆದರೆ ಇದನ್ನು ಯಾರು ತಿಳಿದುಕೊಳ್ಳಲು ಸಾಧ್ಯವಿಲ್ಲ. ಈ ಎಲ್ಲಾ ಮಾತುಗಳು ಹಿಂದೆ ಕಳೆದುಹೋಗಿರುವ ಮಾತುಗಳಾಗಿವೆ. ಈಗ ನೀವು ಪ್ರಾಕ್ಟಿಕಲ್ ಪಾತ್ರ ಮಾಡುತ್ತಿದ್ದೀರಿ. ನಮ್ಮ ತಂದೆ ಶಿಕ್ಷಕ, ಸದ್ಗುರು ಒಬ್ಬರೇ ಆಗಿದ್ದಾರೆಂದು ನೀವು ತಿಳಿದುಕೊಂಡಿದ್ದೀರಿ. ಲೌಕಿಕ ತಂದೆ, ಗುರುಗಳಿಗೆ ಈ ರೀತಿ ಎಂದಿಗೂ ಹೇಳುವುದಿಲ್ಲ. ಇಲ್ಲಿ ಮೂರು ಸಂಬಂಧ ಒಬ್ಬರೇ ಆಗಿದ್ದಾರೆ. ಇದೆಲ್ಲವೂ ತಿಳಿದುಕೊಳ್ಳುವ ಮಾತುಗಳಾಗಿವೆ. ನಾಲೆಜ್ಫುಲ್ ಎಂದು ಒಬ್ಬ ಪರಮಪಿತ ಪರಮಾತ್ಮನಿಗೆ ಮಾತ್ರ ಹೇಳುತ್ತಾರೆ. ಅವರಲ್ಲಿ ಸಂಪೂರ್ಣ ವೃಕ್ಷದ ಜ್ಞಾನವಿದೆ. ಏಕೆಂದರೆ ಅವರು ಚೈತನ್ಯ

ಬೀಜರೂಪವಾಗಿದ್ದಾರೆ. ಬೀಜರೂಪವಾಗಿರುವ ಕಾರಣ ಬಂದು ಸಂಪೂರ್ಣ ಜ್ಞಾನವನ್ನು ಕೊಡುತ್ತಾರೆ. ನಾವು ಈ ದೇಹವನ್ನು ಬಿಟ್ಟು ತಂದೆಯ ಜೊತೆ ಹೋಗುತ್ತೇವೆಂದು ನೀವು ಮಕ್ಕಳು ತಿಳಿದುಕೊಂಡಿದ್ದೀರಿ. ಯಾವಾಗ ನೀವು ಕರ್ಮಾತೀತರಾಗುತ್ತೀರಿ, ಆಗ ನಿಮ್ಮಲ್ಲಿ ಯಾವ ಭೂತವೂ ಇರುವುದಿಲ್ಲ. ದೇಹಾಭಿಮಾನ ನಂಬರ್ವನ್ ಭೂತವಾಗಿದೆ. ಈ ಎಲ್ಲಾ ಭೂತಗಳಿಗೆಲ್ಲಾ ದೊಡ್ಡವನು ರಾವಣನಾಗಿದ್ದಾನೆ. ಭಾರತದಲ್ಲಿಯೇ ರಾವಣನು ಸುಡುತ್ತಾರೆ, ಆದರೆ ರಾವಣ ಏನಾಗಿದ್ದಾನೆಂದು ಯಾರೂ ಸಹ ತಿಳಿದುಕೊಂಡಿಲ್ಲ. ಅಲ್ಲಿ ಯೋಗಬಲದಿಂದ ಮಕ್ಕಳ ಜನ್ಮವಾಗುತ್ತದೆ. ಇಲ್ಲಿ ಯೋಗಬಲದಿಂದ ವಿಶ್ವದ ಮಾಲೀಕರಾದಾಗ, ಯೋಗಬಲದಿಂದ ಮಕ್ಕಳ ಜನ್ಮ ಆಗುವುದಿಲ್ಲವೇನು? ಅಲ್ಲಿ ರಾವಣ ಇರದ ಕಾರಣ ಭೋಗವೆಂಬ ಹೆಸರು ಇರುವುದಿಲ್ಲ. ಒಂದುವೇಳೆ ಭೋಗಿಗಳಾದರೆ ಯೋಗವು ಸಿದ್ಧವಾಗುವುದಿಲ್ಲ. ಈಗ ನೀವು ಯೋಗವನ್ನು ಕಲಿಯುತ್ತಿದ್ದೀರಿ. ಭೋಗಿಗಳಾಗುವುದರಿಂದ ಅಥವಾ ವಿಕಾರಿಗಳಾಗುವುದರಿಂದ ಯೋಗ ಅಂಟುವುದಿಲ್ಲ. ಮಕ್ಕಳಿಗೆ ತಂದೆ, ಶಿಕ್ಷಕ, ಸದ್ಗುರು ಈ ಮೂರು ಸಂಬಂಧದಿಂದ ಒಮ್ಮೆಯೇ ಆಸ್ತಿ ಸಿಗುತ್ತದೆ. ಪ್ರಿಯತಮ ಎಲ್ಲಾ ಸಜಿನಿಯರನ್ನು ಕರೆದುಕೊಂಡು ಹೋಗುತ್ತಾರೆ. ಮೊದಲು ಸಾಜನ್ ಮನೆಗೆ ಹೋಗುತ್ತಾರೆ, ನಂತರ ಸೂರ್ಯವಂಶ, ಚಂದ್ರವಂಶ ಹಾಗೂ ಅವರ ಮನೆತನ, ಆಮೇಲೆ ಇಸ್ಲಾಮಿಗಳ ವಂಶ, ಬೌದ್ಧಿಯರ ವಂಶ, ಈ ರೀತಿ ಎಲ್ಲರು ಹೊರಟು ತಮ್ಮ-ತಮ್ಮ ವಿಭಾಗದಲ್ಲಿ ಕುಳಿತುಕೊಳ್ಳುತ್ತಾರೆ. ಆತ್ಮ ನಕ್ಷತ್ರವಾಗಿದೆ. ಇದು ಬಹಳ ತಿಳಿದುಕೊಳ್ಳುವ ಮಾತಾಗಿದೆ. ಅದೃಷ್ಟವಂತರು ಇವುಗಳನ್ನು ಧಾರಣೆ ಮಾಡಿ ಬೇರೆಯವರಿಗೆ ತಿಳಿಸಿಕೊಡುತ್ತಾರೆ. ಇಂತಹವರ ಪ್ರತಿಯಾಗಿ ಈ ರೀತಿ ಹೇಳುತ್ತಾರೆ-ನಮಗೆ ಇಂತಹವರು ತಿಳಿಸಿಕೊಟ್ಟಾಗ ನಮ್ಮ ಬುದ್ಧಿಯ ಬೀಗ ತೆರೆಯಿತು. ನಮಗೆ ಇವರು ಜೀವಧಾನ ನೀಡಿದರು. ಈ ರೀತಿ ಹೇಳುತ್ತಾ ಅವರಲ್ಲಿಯೇ ಮನಸ್ಸನ್ನು ಇಟ್ಟು ಅವರ ನೆನಪಿನಲ್ಲಿಯೇ ಇರುತ್ತಾರೆ. ಮತ್ತೆ ಅವರನ್ನು ಆ ಬಂಧನದಿಂದ ಬಿಡಿಸಬೇಕಾಗುತ್ತದೆ, ಏಕೆಂದರೆ ದಲ್ಲಾಳಿಯನ್ನು ಯಾರೂ ಸಹ ನೆನಪು ಮಾಡುವುದಿಲ್ಲ. ದಲ್ಲಾಳಿಯ ಕರ್ತವ್ಯವಾದ ನಂತರ ಅವರೊಂದಿಗಿನ ಸಂಬಂಧ ಸಮಾಪ್ತಿ ಆಗುತ್ತದೆ. ಪುನಃ ನೀವು ಪ್ರಿಯತಮನನ್ನು ಪ್ರಿಯತಮೆಯಾಗಿ ನೆನಪು ಮಾಡಬೇಕು. ಬ್ರಹ್ಮಾ ತಂದೆಯೂ ಸಹ ದಲ್ಲಾಳಿ ಆಗಿದ್ದಾರೆ, ಆದುದರಿಂದ ನೀವು ಶಿವ ತಂದೆಯನ್ನು ನೆನಪು ಮಾಡಬೇಕು. ಈ ದಲ್ಲಾಳಿ ಬ್ರಹ್ಮಾ ತಂದೆಯು ಸಹ ಶಿವ ತಂದೆಯನ್ನು ನೆನಪು ಮಾಡುತ್ತಾರೆ. ಬ್ರಹ್ಮಾ ತಂದೆಯು ಪತಿತರಾಗಿರುವ ಕಾರಣ ಅವರ ಮಹಿಮೆಯನ್ನು ಮಾಡುವುದಿಲ್ಲ, ಕೇವಲ ಅವರಲ್ಲಿ ಪ್ರವೇಶ ಮಾಡಿ ಅವರನ್ನು ಪಾವನ ಮಾಡುತ್ತಾರೆ. ಒಬ್ಬರು ಪತಿತರಾಗಿದ್ದಾರೆ, ಮತ್ತೊಬ್ಬರು ಪಾವನರಾಗಿದ್ದಾರೆ. ಸೂಕ್ಷ್ಮವತನದಲ್ಲಿರುವ ಪಾವನ ಬ್ರಹ್ಮನ ಚೆಹರೆಯನ್ನೂ ಸಹ ತೋರಿಸಬೇಕು. ಇಲ್ಲಿರುವ ಬ್ರಹ್ಮಾ ಪತಿತರಾಗಿದ್ದು ನಂತರ ಪಾವನರಾಗಿ ರಾಜ್ಯಭಾರ ಮಾಡುತ್ತಾರೆ. ಈ ಎಲ್ಲಾ ತಿಳುವಳಿಕೆಯನ್ನು ತಂದೆ ಮತ್ತೆ-ಮತ್ತೆ ನೀಡುತ್ತಿರುತ್ತಾರೆ, ಆದರೆ ಬಾಬಾ ನಾವು ನಿಮ್ಮವರಾಗಿಬಿಟ್ಟಿದ್ದೇವೆಂದು ಬಂದು ತಂದೆಗೆ ಮಕ್ಕಳಾಗಬೇಕಲ್ಲವೆ! ನೀವೇ ನಮ್ಮ ತಂದೆ, ಶಿಕ್ಷಕ, ಸದ್ಗುರು ಆಗಿದ್ದೀರಿ ಎಂದು ಹೇಳಬೇಕು. ಆಗ ತಂದೆಯೂ ಸಹ ನಾನು ನಿಮ್ಮನ್ನು ಸ್ವೀಕಾರ ಮಾಡುತ್ತೇನೆಂದು ಹೇಳುವರು. ಆದರೆ ನೆನಪಿಟ್ಟುಕೊಳ್ಳಿ ನನ್ನ ಮಕ್ಕಳೆಂದು ಹೇಳಿ ನನ್ನ ಗೌರವ ಕಳೆಯಬಾರದು. ನನ್ನ ಮಗುವಾಗಿ ವಿಕಾರದಲ್ಲಿ ಹೋಗಬಾರದು. ವಾಸ್ತವಿಕವಾಗಿ ಈ ಸಮಯದಲ್ಲಿ ನರಕವಾಸಿಗಳಾಗಿರುವ ಕಾರಣ ಎಲ್ಲರೂ ಸ್ವರ್ಗವನ್ನು ನೆನಪು ಮಾಡುತ್ತಾರೆ. ಆದುದರಿಂದ ಯಾರಾದರೂ ದೇಹ ಬಿಟ್ಟಾಗ ಸ್ವರ್ಗವಾಸಿಗಳಾದರೆಂದು ಹೇಳುತ್ತಾರೆ. ಹಾಗಾದರೆ ಸ್ವರ್ಗ ಎಲ್ಲಿದೆ? ಒಂದುವೇಳೆ ಅವರು ಸ್ವರ್ಗಕ್ಕೆ ಹೋಗಿದ್ದರೆ ಅವರ ಆತ್ಮನನ್ನು ಇಲ್ಲಿಗೆ ಕರೆದು ಇಲ್ಲಿಯ ಊಟ ಮೊದಲಾದವುಗಳನ್ನು ಏಕೆ ತಿನ್ನಿಸುತ್ತೀರಿ? ಪತಿತ ಪ್ರಪಂಚದಲ್ಲಿ ಪತಿತ ಬ್ರಾಹ್ಮಣರೇ ತಿನ್ನಿಸುತ್ತಾರೆ, ಇಲ್ಲಿ ಯಾರೂ ಪಾವನರಿಲ್ಲ. ಆದರೆ ಈ ಚಿಕ್ಕ ಮಾತನ್ನು ಸಹ ಯಾರೂ ತಿಳಿದುಕೊಳ್ಳುವುದಿಲ್ಲ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಜ್ಞಾನ ಕೊಡುವಂತಹ ದಲ್ಲಾಳಿಯೊಂದಿಗೆ ಪ್ರೀತಿಯನ್ನಿಡದೆ ಒಬ್ಬ ಶಿವ ತಂದೆಯನ್ನು ನೆನಪು ಮಾಡಬೇಕು. ಅವರು ಒಬ್ಬರೇ ಜೀವ ದಾನ ಕೊಡವವರಾಗಿದ್ದಾರೆ.

2. ಈ ಬೇಹದ್ದಿನ ನಾಟಕವನ್ನು ಬುದ್ಧಿಯಲ್ಲಿಟ್ಟುಕೊಂಡು ಅಪಾರ ಖುಷಿಯಲ್ಲಿರಬೇಕು. ದೇಹಭಾನವನ್ನು ಬಿಟ್ಟು ಅಶರೀರಿ ಆಗುವ ಅಭ್ಯಾಸ ಮಾಡಬೇಕು.

ವರದಾನ: ತಮ್ಮ ಸಂಪನ್ನವಾದ ಸ್ವಾಕ್ಷ ಮೂಲಕ ಖುಷಿಗಳ ಖಜಾನೆಯನ್ನು ಹಂಚುವಂತಹ ಹೀರೊ-ಹೀರೋಯಿನ್ ಪಾತ್ರಧಾರಿ ಭವ.

ಸಂಗಮಯುಗದ ಬ್ರಾಹ್ಮಣ ಆತ್ಮರ ಕರ್ತವ್ಯವಾಗಿದೆ - ಸದಾ ಖುಷಿಯಲ್ಲಿರುವುದು ಹಾಗೂ ಖುಷಿಯನ್ನು ಹಂಚುವುದು ಆದರೆ ಇದಕ್ಕಾಗಿ ಖಜಾನೆಯು ಸಂಪನ್ನವಾಗಿರಬೇಕು. ಈಗ ಯಾವ ರೀತಿ ನಾಜೂಕು ಸಮಯವು ಸಮೀಪದಲ್ಲಿ ಬರುತ್ತಿದೆಯೋ ಹಾಗೆಯೇ ಅನೇಕ ಆತ್ಮರು ತಮ್ಮಿಂದ ಸ್ವಲ್ಪ ಸಮಯದ ಖುಷಿಯ ಬೇಡಿಕೆಗಾಗಿ

ಬರುವರು. ಅಂದಮೇಲೆ ಇಷ್ಟು ಸೇವೆಯನ್ನು ಮಾಡಬೇಕು, ಅದರಿಂದ ಯಾರೂ ಖಾಲಿ ಕೈಯಿಂದ ಹೋಗಬಾರದು. ಇದಕ್ಕಾಗಿ ಚಹರೆಯಲ್ಲಿ ಸದಾ ಖುಷಿಯ ಚಿಹ್ನೆಯಿರಲಿ, ಎಂದಿಗೂ ಬೇಸರವಿರುವ, ಮಾಯೆಯಿಂದ ಸೋತಿರುವ, ಹೃದಯ ವಿಧೀರ್ಣರಾಗಿರುವ ಚಹರೆಯಿರಬಾರದು. ಸದಾ ಖುಷಿಯಾಗಿರಿ ಮತ್ತು ಖುಷಿಯನ್ನು ಹಂಚುತ್ತಾ ಇರುತ್ತೀರೆಂದರೆ ಹೀರೋ-ಹೀರೊಯಿನ್ ಪಾತ್ರಧಾರಿ ಎಂದು ಹೇಳುವರು.

ಸ್ಲೋಗನ್: ಒಬ್ಬರಿನ್ನೊಬ್ಬರ ಸಲಹೆಗೆ ಗೌರವ ಕೊಡುವುದೇ ಸಂಘಟನೆಯನ್ನು ಏಕತೆಯ ಸೂತ್ರದಲ್ಲಿ ಬಂಧಿಸುವುದಾಗಿದೆ.